ಸದನದಲ್ಲಿ ಉತ್ತರಿಸುವ ಪ್ರಶ್ನೆ

**ಕರ್ನಾಟಕ ವಿಧಾನ ಪರಿಷತ್ತು**

ಸೋಮವಾರ, ದಿನಾಂಕ: 16ನೇ ಮಾರ್ಚ್, 2020

ಜನರಿಕ್ ಔಷಧಗಳ ವಿತರಣೆ ಬಗ್ಗೆ

ಶ್ರೀ ಎನ್. ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

141 (1210) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ-

(ಅ) 2019-20ನೇ ಸಾಲಿನ ಅಂತ್ಯದವರೆಗೆ ಮಂಡ್ಯ ಜಿಲ್ಲೆಯಲ್ಲಿ ಪ್ರಾರಂಭಿಸಲಾಗಿರುವ ಜನರಿಕ್ ಔಷಧಗಳ ವಿತರಣೆಗೆ ಎಷ್ಟು ಮಳಿಗೆಗಳನ್ನು ಸ್ಥಾಪಿಸಲಾಗಿದೆ ; (ತಾಲ್ಲೂಕುವಾರು ಮಾಹಿತಿ ನೀಡುವುದು)

(ಆ) ತಾಲ್ಲೂಕು ಕೇಂದ್ರ ಆಸ್ಪತ್ರೆಗಳಲ್ಲಿ ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಜನರಿಕ್ ಔಷಧ ಮಳಿಗೆಗಳನ್ನು ತೆರೆಯಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ; (ಪೂರ್ಣ ಮಾಹಿತಿ ನೀಡುವುದು)

(ಇ) ಜನರಿಕ್ ಔಷಧ ಮಳಿಗೆಗಳಲ್ಲಿ ದೊರೆಯುತ್ತಿರುವ ಔಷಧಗಳು ಯಾವುವು; ಇವುಗಳ ಬೆಲೆಗಳ ವಿವರಗಳನ್ನು ಒದಗಿಸುವುದು ;

(ಈ) ಜನರಿಕ್ ಔಷಧಿ ವಿತರಣೆಗೆ ವೈದ್ಯಕೀಯ ಮಳಿಗೆಗಳು/ಔಷಧಿ ಅಂಗಡಿಗಳು ತಮ್ಮ ಪಟ್ಟಭದ್ರ ಹಿತಾಸಕ್ತಿಗಳನ್ನು ಕಾಪಾಡಿಕೊಳ್ಳಲು ಜನರಿಕ್ ಔಷಧಿ ವಿತರಣೆ ಮಾಡಲು ಬರದೇ ಇರುವುದರಿಂದ ಸರ್ಕಾರ ಜನರಿಕ್ ಔಷಧಿಗಳನ್ನು ಎಂ.ಎಸ್.ಐ.ಎಲ್. ಮತ್ತು ಜಿಲ್ಲಾ ಕೈಗಾರಿಕಾ ಕೇಂದ್ರಗಳ ಮುಖೇನ ಆಯಾ ಜಿಲ್ಲೆಗಳಲ್ಲಿರುವ ನಿರುದ್ಯೋಗಿ ಯುವಕರ ಮುಖೇನ ಹಂಚಲು ರಾಜ್ಯ ಸರ್ಕಾರದ ಚಿಂತನೆಯಲ್ಲಿದೆಯೇ ; ಹಾಗಿದ್ದಲ್ಲಿ ಪೂರ್ಣ ಮಾಹಿತಿ ನೀಡುವುದು ?